

# ಮರಳಿನ ಕೋಟೆ!

ಹಿಂದಿನ ಕಾಲದಲ್ಲಿ ರಾಜ್ಯದ ರಕ್ಷಣೆಗೆಂದು ಕೋಟೆಗಳನ್ನು ಕಲ್ಲಿನಲ್ಲೋ, ಸುಟ್ಟ ಇಟ್ಟಿಗೆಗಳಿಂದಲೋ ನಿರ್ಮಿಸುತ್ತಿದ್ದರು. ಆದರೆ ಇಲ್ಲಿ ಕಾಣುತ್ತಿರುವ ಎತ್ತರದ ಕೋಟೆಯು ಬರೀ ಮರಳಿಂದ ನಿರ್ಮಿತವಾಗಿದೆ! ಎಡ್ ಜಾರ‍್ರೆಟ್ ಎನ್ನುವ ಮರಳ ಶಿಲ್ಪಿಯ ಕೈಚಳಕದಿಂದ ಅತ್ಯದ್ಭುತವಾಗಿ ಮೂಡಿರುವ ಈ ಕೋಟೆಯನ್ನು ನೋಡಿದವರು ಮರುಳಾಗುವುದು ಖಂಡಿತ.

ಈತ 2003ರಲ್ಲಿ ವಿಶ್ವದ ಅತ್ಯಂತ ಎತ್ತರದ ಮರಳಶಿಲ್ಪ ರಚಿಸಿ ವಿಶ್ವದಾಖಲೆ ಮಾಡಿದ್ದ. ನಂತರ 2007ರಲ್ಲಿ ಮತ್ತಷ್ಟು ಎತ್ತರದ ಮರಳು ಶಿಲ್ಪ ರಚಿಸಿ ತನ್ನದೇ ಹಳೆ ದಾಖಲೆಯನ್ನು ಮುರಿದ. ಇದೀಗ ಬರೋಬ್ಬರಿ 37 ಅಡಿ 10 ಇಂಚಿನ ಎತ್ತರದ ಕೋಟೆ ಕಟ್ಟಿ ಮತ್ತೊಂದು ಹೊಸ ವಿಶ್ವ ದಾಖಲೆ ಮಾಡಿದ್ದಾನೆ.

ತನ್ನ ಈ 'ಮಾಸ್ಟರ್ ಪೀಸ್'ಅನ್ನು ನಿರ್ಮಿಸಲು ಈತ ಬಳಸಿದ್ದು ಬಕೆಟ್ ಹಾಗೂ ಮೊರ ಗುದ್ದಲಿಯನ್ನು ಮಾತ್ರ. ವಿಶ್ವದಾಖಲೆಯ ಈ ವಿಶಿಷ್ಟ ಕೋಟೆಯನ್ನು ಕಟ್ಟಲು 1500 ಸ್ವಯಂ ಸೇವಕರು 2500 ಗಂಟೆಗಳ ಕಾಲ ಶ್ರಮಿಸಿದ್ದಾರೆ. ಒಟ್ಟು 16 ಲಕ್ಷ ಪೌಂಡ್ ಮರಳನ್ನು ಬಳಸಿದ್ದಾರೆ. ಈ ಮರಳಿನ ಕೋಟೆಯ ಕೆಲಸ ಏಪ್ರಿಲ್ 1ರಂದು ಪ್ರಾರಂಭವಾಗಿ ಮೇ 20ರಂದು ಮುಗಿದಿದೆ.

ಒಟ್ಟು 35 ಅಡಿ 75 ಇಂಚು ಎತ್ತರದ ಕೋಟೆಯನ್ನು ನಿರ್ಮಿಸಲಾಗಿತ್ತು. ಆದರೆ ನೀಲಿ ಹಕ್ಕಿಯೊಂದು ಇದರ ಮೇಲೆ ಹಾರಾಡಿ ತುದಿಯನ್ನು ಮುರಿದದ್ದರಿಂದ ಎತ್ತರ ತುಸು ಕಡಿಮೆಯಾಗಿದೆ. ಅದೂ ಅಲ್ಲದೆ ಹವಾಮಾನ ತಜ್ಞರು ಪ್ರತಿಕೂಲ ಹವೆಯ ಮುನ್ಸೂಚನೆ ನೀಡಿದ್ದರಿಂದ ಜಾರ‍್ರೆಟ್‌ನ ತಂಡ ಬೇಗ ಬೇಗ ತಮ್ಮ ಕೆಲಸ ಮುಗಿಸಬೇಕಾಗಿ ಬಂತು.

ಇದು ಕಟ್ಟಿ ಮುಗಿಯುವ ಎರಡು ವಾರದ ಮೊದಲು ಜಾರ‍್ರೆಟ್ ದಿನಕ್ಕೆ 15 ಗಂಟೆಗಳ ಕಾಲ ಕೆತ್ತನೆ ಕೆಲಸದಲ್ಲಿಯೇ ನಿರತನಾಗಿರುತ್ತಿದ್ದನಂತೆ. ಕೆಲಸದ ಮಧ್ಯೆ ಈತ ವಿರಾಮ ತೆಗೆದುಕೊಂಡಿದ್ದು ತಿನ್ನಲು ಹಾಗೂ ಮಗಳನ್ನು ಶಾಲೆಗೆ ಬಿಟ್ಟುಬರಲು ಮಾತ್ರವಂತೆ!

■ ವಿದ್ಯಾ ವಿ ಹಾಲಭಾವಿ




